ಕ್ಷಣಕಾಲ ನಾನೂ ಉಸಿರುಗಟ್ಟುವ ಸ್ಥಿತಿಯನ್ನನುಭವಿಸಿದೆ. ಎರಡು ಮೂರು ಬಾರಿ ಅಮೆರಿಕವೂ ಸೇರಿ ಒಂದೆರಡು ಹೊರದೇಶಗಳಿಗೆ ಹೋಗಿ ಬಂದವ. ಆಧುನಿಕ ಜೀವನದ ಎಲ್ಲ ಅವಸ್ಥಾಂತರಗಳಿಗೆ ಸಾಕ್ಷಿಯಾಗುತ್ತಿರುವವ. ಆದರೆ ನಾನು ಬಾಲ್ಯದಿಂದ ಕಂಡ ಹಿರಿಯ ಒಡನಾಡಿಯಾಗಿ ಗೌರವಿಸುತ್ತಿದ್ದ ಗೋವಿಂದಜ್ಜನ ಹೇಳಿಕೆ. ಉದ್ಗಾರ, ಉದ್ವೇಗವನ್ನೆಲ್ಲ ಅಷ್ಟು ಸುಲಭದಲ್ಲಿ ತಳ್ಳಿಹಾಕದೆ, ಅತ್ತ ಸುಮ್ಮನೆ ಕುಳಿತು ಪ್ರವಚನವನ್ನು ಕೇಳಲಾಗದೆ ಸಟಕ್ಕನೆ ಎದ್ದು ಅವರನ್ನೇ ಹಿಂಬಾಲಿಸುವಂತೆ ಹೊರನಡೆದೆ ಅರಸುತ್ತ.

ಇದೇನು ಗೋವಿಂದಯ್ಯ ಮಾತ್ರ ನೋಡಿದ ದೃಶ್ಯವೇ...? ಉಳಿದವರೂ ನೋಡಿರಬಹುದು. ಗಣನೆಗೆ ತಂದುಕೊಳ್ಳದೆ ಅಥವಾ ತುಸು ರಂಜನೆಯಿಂದ ಅನುಭವಿಸಿರಬಹುದು. ಇದರಲ್ಲಿ... ಇದರಲ್ಲಿ ಗೋವಿಂದಯ್ಯನ ಅಪರಾಧವೇನಿದೆ..? ಹೀಗೆಲ್ಲ ತರ್ಕಿಸಲೂ ಆಗದೆ ನಿಂತಲ್ಲಿಯೇ ನಿಲ್ಲಲೂ ಆಗದೆ ಹೊರಗಿನ ಗಾಳಿಯಲ್ಲಿ ಚೇತರಿಸಿಕೊಳ್ಳತೊಡಗಿದೆ. ದೀರ್ಘ ಅವಧಿಯ ಸಾಂಪ್ರದಾಯಿಕ ಮಡಿವಂತಿಕೆಯ ಜೀವ ಎಷ್ಟು ಯಾತನೆಗೆ ಒಳಗಾಗಿದೆಯೋ ಎಂಬ ಅನುಕಂಪ ಕಾಡಿದ್ದರಿಂದಲೋ ಏನೋ ಅವರನ್ನು ಹುಡುಕಲು ಅವಸರಿಸಿದೆ.

ಹಾಂ. ಈ ಮೇಲಿನ ವೃತ್ತಾಂತವನ್ನೆಲ್ಲ ಇಂದು ಅಂದರೆ ವರ್ತಮಾನದಲ್ಲಿ ನಡೆದಂತೆ ನಿಮಗೆ ಹೇಳುತ್ತಿದ್ದೆನಲ್ಲ... ಆದರೆ ನಿಜವಾಗಿ ನಡೆದದ್ದು ಇಂದಲ್ಲ; ನಿನ್ನೆಯೂ ಅಲ್ಲ.. ಒಂದಷ್ಟು ಕಾಲದ ಹಿಂದೆ ಎಂದಿಟ್ಟುಕೊಳ್ಳಿ... ವರ್ತಮಾನಕ್ಕೆ ಅನ್ವಯಿಸಲು ಕತೆಗಾರನಾದ ನನ್ನಲ್ಲಿ ಬೇರೇನೂ ಕಾರಣಗಳು ಇಲ್ಲವಲ್ಲ... ಆದರೆ ಒಂದು ಕಾರಣವಂತೂ ಇದ್ದೇ ಇದೆ. ಇಂದು ನಿನ್ನೆಯ ಹಾಗಲ್ಲ ಎಂಬುದನ್ನು ಸಂಕೇತಿಸುವ ಇರಾದೆ... ಅಥವಾ ಕಾಲ ನಿರಂತರ ಎಂಬುದನ್ನು ಸಾಬೀತುಪಡಿಸುವ ಸಂಕಲ್ಪ.

ಗೋವಿಂದಯ್ಯ ಸಟಕ್ಕನೆ ಎದ್ದು ಅವರನ್ನು ನಾನು ಹಿಂಬಾಲಿಸುವ ಆ ಕ್ಷಣ ಪ್ರವಚನವು ಯಾವ ಘಟ್ಟದಲ್ಲಿತ್ತು ಎಂದರೆ..

ಮತ್ಸಗಂಧಿ ಹೇಳುತ್ತದ್ದಳು 'ಪಶ್ಯ ಭಗವನ್ ಪಾರಾವಾರೇ ಸ್ಥಿತಾನಿತ್ಯನ್..'ಕಾಣುವರಲ್ಲ ಋಷಿಗಡಣ ಉಭಯ ದಡದಂಗಣದಲ್ಲಿ? ಅದಕ್ಕೆ 'ಕಾಣದಂತೆ ಕವಿದಿದೆ ಮಂಜು ನದಿಯ ಇಕ್ಕೆಲಗಳಲ್ಲಿ' ಎಂಬ ಸಮಾಧಾನ ಪರಾಶರರಿಂದ.... ಕನ್ಯತ್ವದ ನಾಶದ ಭಯ ಬಾಲಿಕೆಯದು... ಅದಕ್ಕೂ ಸಮಾಧಾನ ಮಹಾ ಮುನಿಗಳಿಂದ.... 'ಆಗು ನೀ ಮರಳಿ ಕನ್ಯೆ, ಸರ್ವಸಾಮಾನ್ಯೆ....'

ಪ್ರವಚನ ಹೇಗೇ ಸಾಗಲಿ ಇಲ್ಲಿಗೇ ಕತೆಯನ್ನು ನಿಲ್ಲಿಸಿದರೆ ಹೇಗೆ? ಗೋವಿಂದಯ್ಯನ ಹಾಡನ್ನು ಊಹಿಸುವ ಭಾರವನ್ನೆಲ್ಲ ನಿಮ್ಮ ಮೇಲೆ ಹೊರಿಸಿ ತಿಂಗಳ ಕಾಲ ನಡೆಯುವ 'ಮಹಾಭಾರತ' ಪ್ರವಚನಕ್ಕೆ ಖಾಯಂ ಕೇಳುಗನಾಗಿ ನನ್ನ ಪಾಡಿಗೆ ನಾನಿದ್ದರೆ ಹೇಗೆ?

ಛೆ ಸಲ್ಲದು! ಅದೂ ಈ ಗೋವಿಂದಜ್ಜ ಎತ್ತಿ ಆಡಿಸಿ ಬೆಳೆಸಿದ ನನ್ನಿಂದ ಅಂಥ ಹೊಣೆಗೇಡಿತನ ಕೂಡದು. ನಿಮಗಾದರೂ ಏನು ತಿಳಿದಿದೆ ಈ ಹಿರಿಯರ ಬಗೆಗೆ? ಬನಿಯನ್ನು ಬಿಡಿ– ಹೊರ ಅಂಗಿ, ಯಾವುದೇ ಸಿದ್ಧ ದಿರಿಸು, ಕೋಟು, ಒಳಚಡ್ಡಿ ಹಾಕಿಕೊಂಡವರಲ್ಲ. ಒಂದು ಜೊತೆ ಪಾಣಿ ಪಂಚೆಯಲ್ಲಿ ಬಾಳಿದವರು. ಚಹಾ ಕಾಫಿ ಕುಡಿದವರಲ್ಲ. ಪ್ರವಚನಕ್ಕೆ ಯಾ ಗುರುಗಳ ಸಂದರ್ಶನಕ್ಕೆ ಹೋಗುವಾಗ ಮಾತ್ರ ಅವರೇ ಅನುಗ್ರಹಿಸಿ ಹೆಗಲ ಸುತ್ತ ಎಸೆದ ಜರಿ ಅಂಚಿನ ಉತ್ತರೀಯ ಮಾತ್ರ ಅವರ ಬಳಿ ಇರುವ ಅಬ್ಬರದ ವಸ್ತ್ರಾಲಂಕಾರ. ಹತ್ತೂರು ಸುತ್ತಿದವರಲ್ಲ. ಹೋಟೆಲು ಪಾನಿಪೂರಿ ಅದು.... ಇದು.... ಎಂದು ತಿಂದವರಲ್ಲ. ವ್ರತ ನಿಯಮಗಳ ಅನುಷ್ಠಾನ ಮಾತ್ರ ಗೊತ್ತು.

## ನಂಬಿಕೆ

ನಾವು ದೇವರ
ನಂಬಿದರೇನು ಫಲ?
ದೇವರು ನಮ್ಮ
ನಂಬದಿರೆ ಎಲ್ಲ ವಿಫಲ!

★ ಬಿರ್ತಿ ಸುರೇಶ್




ಪಾಣಿಪಂಚೆಯ ಹೊರಗೆ ಪ್ರಪಂಚ ಕಂಡವರಲ್ಲ. ಅಷ್ಟು ಬಿಡಿ. ಇದೇ ಪ್ರವಚನ ಮಂದಿರದ ಪಕ್ಕದ ಗುಡಿ, ಗೋಪುರ, ರಥದಲ್ಲಿರುವ ಶೃಂಗಾರ ಶಿಲ್ಪಗಳೆಡೆಗೆ ಕಣ್ಣು ಹಾಯಿಸಿದವರೂ ಅಲ್ಲ. ರಥದ ಎತ್ತರ ಗೋಪುರದ ಎತ್ತರ, ಅದಕ್ಕಿಂತಲೂ ಎತ್ತರದೆಡೆಯ ದೃಷ್ಟಿ ಹಾಯಿಸುತ್ತಾ ಧ್ಯಾನಸ್ಥರಾಗುತ್ತಿರುವ ಜೀವ ಅವರದ್ದು. ಒಡನಾಡಿಗಳೆಲ್ಲ ಬಹಳ ಒತ್ತಾಯ ಮಾಡಿದರೆಂದು, ಅದೂ ಪುಣ್ಯ ಕಥೆಯ ಚಿತ್ರವೆಂದು 'ಭಕ್ತ ಪ್ರಹ್ಲಾದ' ಚಲನ ಚಿತ್ರ ನೋಡಲು 'ಅಪೂರ್ವ'ಕ್ಕೆ ಬಂದ ಡೇರೆ ಟಾಕೀಸಿಗೆ ಹೋಗಿ ಕುಳಿತವರೇ ಅರ್ಧಕ್ಕೆ ಹೊರಗೋಡಿ ಬಂದು 'ಎಂಥ ಇದು? ಯಾವ ಪುಣ್ಯಕ್ಕೆ ಇದೆಲ್ಲ ನರಳಾಟ, ಬರಿ ಚೀರಾಟ' ಎಂದು ನಕ್ಕು ನುಡಿದವರು. 'ನರಸಿಂಹ ಗರ್ಭಗುಡಿಯಲ್ಲಿದ್ದಾನೆ... ಹೊರಗೆ ಹೇಗೆ ಬಂದಾನು?' ಎಂದು ಮಹಾ ಸತ್ಯ ಕಂಡವರಂತೆ ಅಬ್ಬರಿಸಿದವರು.

ನಾನಾಗ ಮೂರೊ ನಾಲ್ಕು ವರ್ಷದ ಲಂಗೋಟಿ ಪುಟ್ಟ. ನನ್ನಜ್ಜನ ಮನೆಗೆ ಪಾರಾಯಣಕ್ಕೆ ಬರುತ್ತಿದ್ದ ಈ ಗೋವಿಂದಜ್ಜ ನನ್ನನ್ನು ಬದಿಯಲ್ಲಿ ಕುಳ್ಳಿರಿಸಿ ಹೇಳುತ್ತಿದ್ದ ಕಥೆಗಳಿಗೆ ಲೆಕ್ಕ ಉಂಟೆ. ಪ್ರಹ್ಲಾದ, ಧ್ರುವ, ಅಂಬರೀಷ... ಹೀಗೆ ಲೆಕ್ಕವಿಲ್ಲದಷ್ಟು. ಒಂದು ದಿವಸ ಏನಾಯಿತು ಎಂದರೆ.. ಪಾರಾಯಣ ಮುಗಿದು ಊಟವೆಲ್ಲ ಆಗಿ ಕಥೆ ಗಿತೆ ಮುಗಿದು 'ಬರ್ತೀಯಾ ನನ್ನ ಮನೆಗೆ' ಎಂದು ನನ್ನನ್ನು ರಮಿಸಿ ಕೇಳಿದರಂತೆ.... 'ಬತ್ತೆ ಹೆಸರು ಬೇಳೆ ಪಾಚ (ಪಾಯಸ) ಕೊಡ್ತೀರಾ' ಎಂದು ನಾನು ಬೇಡಿದ್ದೆನಂತೆ ..ಎಷ್ಟೋ ಹೊತ್ತಿನ ಮೇಲೆ ಮನೆ ದಾರಿ ಹಿಡಿದ ಗೋವಿಂದಪ್ಪ ಹಿಂದಿನಿಂದ ಯಾರೋ ಬರುತ್ತಿದ್ದ ಸಪ್ಪಳ ಆಲಿಸಿ ನಿಂತು ಹಿಂದಿರುಗಿ ನೋಡಿದಾಗ ಕಂಡದ್ದೇನು... ಲಂಗೋಟಿ ಬಾಲಕ ಹಿಂಬಾಲಿಸುತ್ತಿದ್ದಾನೆ....' ಎಂಥದಾ ಧ್ರುವನ ನೀನು? ನಾರಾಯಣನನ್ನು ಹುಡುಕುತ್ತಾ ಹೊರಟೆಯಾ' ಎಂದು ಪ್ರೀತಿಯಿಂದ ಕೇಳಿದ್ದರಂತೆ. 'ಹೆಸ್ರು ಬೇಳೆ ಪಾಚ ಕೊಡ್ತೇನೆ ಎಂದಿದ್ದೀರಲ್ಲಾ' ಎಂಬ ತೊದಲು ಬೇಡಿಕೆ ಬಾಲಕನಿಂದ, 'ಅಯ್ಯೋ ಮಾರಾಯ. ನೀನು ಮರೆತೇ ಇಲ್ಲವಾ, ಸರಿ ಬಾ' ಎಂದು ಹೂ ಎತ್ತಿದ ಹಾಗೆ ನನ್ನನ್ನೆತ್ತಿ ಮರಳಿ ಅಜ್ಜನ ಮನೆಗೆ ಬಂದು 'ಇಗಾ ಸರಸಾ – (ನನ್ನಮ್ಮ) ಅಣ್ಣಯ್ಯನಿಗೆ ಈಗ್ಲೆ ಹೆಸ್ರು ಬೇಳೆ ಪಾಯಸ ಮಾಡಿಸಿ ತಿನ್ನಿಸಾಯಿತಾ. ಮರಿಬೇಡ' ಎಂದು ತಾಕೀತು ಮಾಡಿ ಸಡಿಲಾದ ಬೈರಾಸವನ್ನು ಬಿಗಿಯಾಗಿ ಸುತ್ತುತ್ತ ಮನೆಗೆ ಹೊರಟಿದ್ದರಂತೆ.

ಹೀಗೆ ವರ್ತಮಾನದಿಂದ ಭೂತಕ್ಕೆ ಜಾರಿ ಈಗ ಭವಿಷ್ಯದ ದಾರಿಯಲ್ಲಿ ವಿದೇಶಿಯರ ಚುಂಬನ ಚಿತ್ರವನ್ನು ಮನೋಭಿತ್ತಿಯಲ್ಲಿ ಅಂಟಿಸಿಕೊಂಡು ಒದ್ದಾಡುತ್ತಿರುವ ಗೋವಿಂದಯ್ಯನನ್ನು ಬೆಳೆದ ನಾನು ಹಿಂಬಾಲಿಸದಿದ್ದರೆ ಹೇಗೆ... ಕುತೂಹಲದಿಂದ ಕಥೆ ಕೇಳುತ್ತಿರುವ ನಿಮ್ಮನ್ನು ನಡುನೀರಿನಲ್ಲಿ ಬಿಡಬಾರದಲ್ಲ... ದಡ ಸೇರಿಸಲೇಬೇಕಲ್ಲ. ಪರಾಶರರನ್ನು ಮತ್ಸ್ಯಗಂಧಿ ದಡ ಸೇರಿಸಿದಂತೆ ಒಂದು ನಾಂದಿ ಹಾಡಲೇಬೇಕಲ್ಲ. ಮಿಂಚಿನಂತೆ ಮಾಯವಾದ ಗೋವಿಂದಯ್ಯ ಮನೆ ಸೇರಿರಲೇಬೇಕೆಂದು ನಿರ್ಧರಿಸಿ ಹಿಂಬಾಲಿಸಿದೆ.

ಪರಿಚಿತ ದಾರಿ. ತೋಟ ದಾಟಿದೆ. ಬಯಲು ಬಳಸಿ ಮನೆಯ ಹೆಬ್ಬಾಗಿಲ ಮುಂದೆ ನಿಂತಿದ್ದೇನೆ. ಹಿಂದಿನ ಸಲುಗೆಯಿಂದ ಅದೆ ಮುಚ್ಚಿದ ಹಳೆಯ ಕೆತ್ತನೆಯ ಬಾಗಿಲನ್ನು ದೂಡಿ ತೆರೆಯುವ ಧೈರ್ಯವಾಗಲಿಲ್ಲ. ಆ ಭದ್ರ ಬಾಗಿಲೋ, ಭೀಮಸೇನನೇ ಬರಬೇಕು ದೂಡಿ ತೆಗೆಯಲು.... ತೆಗೆಯುವ ಪ್ರಯತ್ನ ಮಾಡಿದರೆ ಸಾಕು. ಯಾವುದೋ ಕಾಲದ ಪ್ರತಿಧ್ವನಿಯಂತೆ ಕಿರ್ರೆನ್ನುತ್ತಿತ್ತು.

ಬಾಗಿಲ ಬಳಿ ಬಂದವ ಒಳಗಿಣಿಕಿದೆ. ಜಗಲಿಯ ಮೇಲೆ ಕೆತ್ತನೆಯ ಕಂಬಕ್ಕೆ ಹಣೆ ಚಚ್ಚಿಕೊಳ್ಳುತ್ತ ಕುಸಿದಿದ್ದಾರೆ ಗೋವಿಂದಜ್ಜ ಎಂದೇ ನನ್ನೆಣಿಕೆ. ಅಜ್ಜಿಯ ಸಮಾಧಾನದ ನುಡಿಗಳಿಗೂ ಕಿವಿಗೊಡದೆ ಮಂಕರಂತಿದ್ದಾರೆ ನನ್ನ ಪ್ರೀತಿಯ ಗೋವಿಂದಜ್ಜ ಎಂದೇ ನನ್ನ ಕಲ್ಪನೆ.

ಇಲ್ಲ .... ಹಾಗೇನೂ ಆಗಿರುವುದಿಲ್ಲ. ಯಾವ ದುರಂತವೂ ನಡೆದಿರಲಿಲ್ಲ... ಬದಲು.... ಪ್ರವಚನ ಮಂದಿರದ ಪ್ರದೇಶದ ಕ್ಷಣ ಗಲಿಬಿಲಿಗೊಂಡ ಗೋವಿಂದಜ್ಜ ತನ್ನ ಹೃದಯ ಸಾಗರದಲ್ಲಿ ಸದಾ ಧ್ಯಾನಮೂರ್ತಿಯಾಗಿರಿಸಿಕೊಂಡ ಶೇಷಶಾಯಿಯಂತೆ ಕಂಬಕ್ಕೆ ಬೆನ್ನೊರಗಿಸಿ ಕಾಲು ನೀಡಿ ಆರಾಮವಾಗಿದ್ದರು. ಬದಿಯಲ್ಲೇ ಶಿಲ್ಪದಲ್ಲಿ ಕಾಣುತ್ತೀರಲ್ಲಾ, ನೃತ್ಯದಲ್ಲಿ ಕಾಣುತ್ತೀರಲ್ಲಾ. ಕಾಲೊತ್ತಲು ಹೆಣ್ಣೇ ಆಗಬೇಕೇ ಎಂಬ ಆಕ್ಷೇಪ ಕೇಳಿಸಿಕೊಳ್ಳುತ್ತಿರಲಿಲ್ಲಾ. ಹಾಗೆ ಆ ಶೇಷಶಾಯಿಯ ಪತ್ನಿಯಂತೆ ಕಾಲೊತ್ತಿದೆ. ಆದರೆ ಬಾಗಿ ಸುಖ ದುಃಖ ವಿಚಾರಿಸುವಂತೆ ಕುಳಿತಿದ್ದರು ನನ್ನ ಪ್ರೀತಿಯ